ಶಿಥಿಲಗೊಂಡಿದ್ದು ಇವುಗಳನ್ನು ಬದಲಿಸಲು ರೂ. 35,25ಕೋಟಿ ವೆಚ್ಚದ, ತುರ್ತು ಯೋಜನೆಯನ್ನು ಹಾಗೂ ಮಲಪ್ರಭಾ 3ನೇ ಹಂತದ ಯೋಜನೆಗಾಗಿಯು ಸಹ 130ಕೋಟಿ ರೂಪಾಯಿಗಳ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

**ಹುಬ್ಬಳ್ಳಿ ಮಹಾನಗರದ ಟ್ರಾಫಿಕ್ ಐಲ್ಯಾಂಡ್ ಬಳಿ ಫ್ಲೈಓವರ್ ಬ್ರಿಡ್ಜ್ ನಿರ್ಮಿಸುವುದು**

1093(1542)

**ಶ್ರೀ ಜಗದೀಶ್ ಶೆಟ್ಟರ್,** ಎಂಎಲ್ಎ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ ಮಹಾನಗರದ ಟ್ರಾಫಿಕ್ ಐಲ್ಯಾಂಡ್ ಸುತ್ತಮುತ್ತ ಪ್ರದೇಶದಲ್ಲಿ ವಾಹನಗಳ ಮತ್ತು ಪಾದಚಾರಿಗಳ ಸರಳ ಪ್ರಯಾಣಕ್ಕೆ ಬಹಳಷ್ಟು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ದಟ್ಟಣೆ ನಿವಾರಣೆ ಸಲುವಾಗಿ ಸದರೀ ಪ್ರದೇಶದಲ್ಲಿ ಫ್ಲೈಓವರ್ ಬ್ರಿಜ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು?

**ಶ್ರೀ ಮಿರಾಜುದ್ದೀನ್ ಎನ್ ಪಟೇಲ್** (ಪೌರಾಡಳಿತ ರಾಜ್ಯ ಸಚಿವರು.):

ಅ) ಬಂದಿದೆ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

**ರಾಜ್ಯದಲ್ಲಿ ವಿದ್ಯಾರ್ಥಿನಿಲಯಗಳ ಮಂಜೂರಾತಿ**

1095 (1678)

**ಶ್ರೀ ಜಗದೀಶ್ ತಮ್ಮಣ್ಣಗೌಡ ಪಾಟೀಲ್** (ಬೀಳಗಿ): ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

(ಅ) 1998-99ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ವಿದ್ಯಾರ್ಥಿನಿಲಯಗಳನ್ನು ಹಿಂದುಳಿದ ವರ್ಗದವರಿಗಾಗಿ ಮಂಜೂರು ಮಾಡಲಾಗಿದೆ?

(ಆ) ಬೀಳಗಿ ತಾಲ್ಲೂಕಿನ ಕುಂದರಗಿ ಗ್ರಾಮಕ್ಕೆ ಮೆಟ್ರಿಕ್ ಪೂರ್ವ ಹಿಂದುಳಿದ ವರ್ಗಗಳ ನಿಲಯ ಪ್ರಾರಂಭಿಸಲು ಕಳೆದ 4-5ವರ್ಷಗಳಿಂದ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದಯೇ?

(ಇ) ಹಾಗಿದ್ದಲ್ಲಿ ಇದನ್ನು ಪ್ರಾರಂಭಿಸದೇ ಇರಲು ಕಾರಣಗಳೇನು?

**ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್** (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು.):

(ಅ) 1998-99ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು 40 ಮೆಟ್ರಿಕ್ ಪೂರ್ವ ಹಾಗೂ 5 ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿರುತ್ತದೆ.

(ಆ) ಹೌದು.